## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1307 |
| ಸದಸ್ಯರ ಹೆಸರು | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 24.12.2021 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2021ನೇ ಸಾಲಿನ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ವಾಯುಭಾರ ಕುಸಿತದ ಪರಿಣಾಮ ಸುರಿದ ಮಳೆಗೆ ಕೋಲಾರ ಜಿಲ್ಲೆಯಲ್ಲಿ ಕೃಷಿ ಬೆಳೆಗಳು ಹಾನಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ಕೋಲಾರ ಜಿಲ್ಲೆಯಲ್ಲಿ 2021 ನೇ ಸಾಲಿನ ಅಕ್ಟೋಬರ್ ಮಾಹೆಯಲ್ಲಿ 107 ಹೆಕ್ಟೇರ್ ಹಾಗೂ ನವೆಂಬರ್ ಮಾಹೆಯಲ್ಲಿ 48332.60 ಹೆಕ್ಟೇರ್‌ಗಳಷ್ಟು ಕೃಷಿ ಬೆಳೆಗಳು ಹಾನಿಯಾಗಿರುವ ಬಗ್ಗೆ ವರದಿಯಾಗಿರುತ್ತದೆ.<br>ತಾಲ್ಲೂಕುವಾರು ಹಾಗೂ ಬೆಳೆವಾರು ಹಾನಿಯಾದ ವಿವರವನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಿದೆ. |
| ಆ) | ಬಂದಿದ್ದಲ್ಲಿ, ಎಷ್ಟು ಹೆಕ್ಟೇರ್ ಪ್ರದೇಶಗಳಲ್ಲಿ ಯಾವ್ಯಾವ ಬೆಳೆಗಳು ಹಾನಿಗೊಳಗಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | |
| ಇ) | ನಷ್ಟ ಹೊಂದಿದ ರೈತರಿಗೆ ಪರಿಹಾರ ರೂಪದಲ್ಲಿ ಪ್ರತಿ ಎಕರೆಗೆ ಎಷ್ಟು ಹಣವನ್ನು ನೀಡಲಾಗುವುದು; | ಪ್ರಕೃತಿ ವಿಕೋಪದಿಂದಾಗಿ ಶೇ.33 ಕ್ಕಿಂತ ಹೆಚ್ಚಿನ ಬೆಳೆ ಹಾನಿಗೆ ತುತ್ತಾದ ಕೃಷಿಕರಿಗೆ ಕೇಂದ್ರ ಸರ್ಕಾರದ NDRF/SDRF ಮಾರ್ಗಸೂಚಿಗಳ ಪ್ರಕಾರ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಪ್ರತಿ ಹೆಕ್ಟೇರ್‌ಗೆ ಈ ಕೆಳಕಂಡ ದರದಲ್ಲಿ ಇನ್‌ಪುಟ್ ಸಬ್ಸಿಡಿಯನ್ನು ಪರಿಹಾರ ತಂತ್ರಾಂಶದ ಮೂಲಕ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತಿದೆ.<br>ಬೆಳೆ ವಿಧ — ಇನ್‌ಪುಟ್ ಸಬ್ಸಿಡಿ (ಪ್ರತಿ ಹೆಕ್ಟೇರ್‌ಗೆ)<br>ಮಳೆಯಾಶ್ರಿತ ಬೆಳೆ — ರೂ.6,800/-<br>ನೀರಾವರಿ ಬೆಳೆ — ರೂ.13,500/-<br>ಬಹು ವಾರ್ಷಿಕ ಬೆಳೆ — ರೂ.18,000/- |
| ಈ) | ರಾಜ್ಯದಲ್ಲಿ ಪ್ರಸಕ್ತ ವರ್ಷ ಹತ್ತು ಸಾವಿರ ಕೋಟಿ ರೂಪಾಯಿ ಬೆಳೆ ಹಾನಿಯಾಗಿರುವುದು ನಿಜವೇ; | ಇಲ್ಲ.<br>ಪ್ರಸಕ್ತ ವರ್ಷದಲ್ಲಿ ಹಾನಿಯಾದ ಕೃಷಿ ಬೆಳೆಗಳಿಗೆ ಒಟ್ಟು ರೂ. 8752.61 ಕೋಟಿಗಳಷ್ಟು ನಷ್ಟವನ್ನು ಅಂದಾಜಿಸಲಾಗಿದೆ. |

| | | |
|---|---|---|
| ಉ) | ಹಾಗಿದ್ದಲ್ಲಿ, ಕೇಂದ್ರ ಸರ್ಕಾರದಿಂದ ಬಂದಿರುವ ಪರಿಹಾರ ಧನವೆಷ್ಟು; | ಪ್ರಸಕ್ತ ವರ್ಷದ ಜುಲೈ, ಆಗಸ್ಟ್, ಅಕ್ಟೋಬರ್ ಮತ್ತು ನವೆಂಬರ್ ಮಾಹೆಯಲ್ಲಿ ರಾಜ್ಯದಲ್ಲಿ ಸಂಭವಿಸಿದ ಅತಿವೃಷ್ಟಿ / ಪ್ರವಾಹಗಳಿಂದಾದ ಹಾನಿಗೆ ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೋರಂಡಮ್ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಆರ್ಥಿಕ ಸಹಾಯವನ್ನು ನಿರೀಕ್ಷಿಸಲಾಗಿದೆ.<br>ಆದಾಗ್ಯೂ, ಪ್ರಸಕ್ತ ಸಾಲಿನಲ್ಲಿ ಅತಿವೃಷ್ಟಿ/ ಪ್ರವಾಹದಿಂದ ಉಂಟಾದ ಬೆಳೆ ಹಾನಿಗೆ ಕೇಂದ್ರ ಸರ್ಕಾರದ NDRF ಅನುದಾನಕ್ಕಾಗಿ ಕಾಯದೇ ಬೆಳೆ ಹಾನಿ ವಿವರಗಳನ್ನು' ಪರಿಹಾರ ತಂತ್ರಾಂಶ' ದಲ್ಲಿ ನಮೂದಿಸಿದ 3-4 ದಿನದಲ್ಲಿಯೇ ರೈತರಿಗೆ ಇನ್‌ಪುಟ್ ಸಬ್ಸಿಡಿಯನ್ನು ಪಾವತಿಸಲಾಗುತ್ತಿದೆ. ಈವರೆಗೆ 12.66 ಲಕ್ಷ ರೈತರಿಗೆ ರೂ. 852.41 ಕೋಟಿ ಇನ್‌ಪುಟ್ ಸಬ್ಸಿಡಿಯನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗಿದೆ. |
| ಊ) | ರಾಜ್ಯದಲ್ಲಿ ಕಳೆದ ಎರಡು ವರ್ಷದಿಂದ ಮುಂಗಾರು ಹಾಗೂ ಹಿಂಗಾರು ಮಳೆ ಸಂದರ್ಭದಲ್ಲಿ ಅತಿವೃಷ್ಟಿಯಿಂದ ಎಷ್ಟು ಬೆಳೆ ಹಾನಿಗೊಳಗಾಗಿದೆ? | ರಾಜ್ಯದಲ್ಲಿ ಕಳೆದ ಎರಡು ವರ್ಷದಿಂದ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಅತಿವೃಷ್ಟಿಯಿಂದ 33.42 ಲಕ್ಷ ಹೆಕ್ಟೇರ್ ಗಳಷ್ಟು ಕೃಷಿ ಬೆಳೆಗಳ ಹಾನಿಯಾಗಿರುವ ಬಗ್ಗೆ ವರದಿಯಾಗಿರುತ್ತದೆ. |

ಸಂಖ್ಯೆ: AGRI-ACT/196/ 2021

(ಬಿ.ಸಿ. ಪಾಟೀಲ್)

ಕೃಷಿ ಸಚಿವರು

## ಅನುಬಂಧ-1 (LCQ-1307)

## ಕೋಲಾರ ಜಿಲ್ಲೆಯಲ್ಲಿ 2021 ನೇ ಸಾಲಿನ ಅಕ್ಟೋಬರ್ ಮಾಹೆಯಲ್ಲಿ ಬೆಳೆನಷ್ಟದ ವಿವರ

ವಿಸ್ತೀರ್ಣ : ಹೆಕ್ಟೇರ್ ಗಳಲ್ಲಿ

| ಕ್ರ.ಸಂ | ತಾಲ್ಲೂಕು | ಮುಸುಕಿನ ಜೋಳ | ಭತ್ತ | ಜೋಳ | ರಾಗಿ | ನೆಲಗಡಲೆ | ಸಾಮೆ | ತೊಗರಿ | ಒಟ್ಟು |
|---|---|---|---|---|---|---|---|---|---|
| 1 | ಕೋಲಾರ | 0 | 0 | 0 | 0 | 0 | 0 | 0 | 0 |
| 2 | ಮಾಲೂರು | 0 | 0 | 0 | 0 | 0 | 0 | 0 | 0 |
| 3 | ಬಂಗಾರಪೇಟೆ | 0 | 0 | 0 | 0 | 0 | 0 | 0 | 0 |
| 4 | ಕೆ.ಜಿ.ಎಫ್. | 1 | 7 | 0 | 27 | 15 | 3 | 10 | 63 |
| 5 | ಮುಳಬಾಗಿಲು | 0 | 11 | 0 | 4 | 29 | 0 | 0 | 44 |
| 6 | ಶ್ರೀನಿವಾಸಪುರ | 0 | 0 | 0 | 0 | 0 | 0 | 0 | 0 |
| | ಒಟ್ಟು | **1** | **18** | **0** | **31** | **44** | **3** | **10** | **107** |

ಅನುಬಂಧ-2 (LCQ-1307)

ಕೋಲಾರ ಜಿಲ್ಲೆಯಲ್ಲಿ 2021 ನೇ ಸಾಲಿನ ನವೆಂಬರ್ ಮಾಹೆಯಲ್ಲಿ ಬೆಳೆನಷ್ಟದ ವಿವರ

ವಿಸ್ತೀರ್ಣ : ಹೆಕ್ಟೇರ್ ಗಳಲ್ಲಿ

| ಕ್ರ.ಸಂ | ತಾಲ್ಲೂಕು | ಮುಸುಕಿನ ಜೋಳ | ಭತ್ತ | ರಾಗಿ | ನೆಲಗಡಲೆ | ಸಾಮೆ | ತೊಗರಿ | ಒಟ್ಟು |
|---|---|---|---|---|---|---|---|---|
| 1 | ಕೋಲಾರ | 0.4 | 86 | 14714 | 0 | 0 | 281.2 | 15082 |
| 2 | ಮಾಲೂರು | 0 | 31 | 9457 | 0 | 26 | 25 | 9539 |
| 3 | ಬಂಗಾರಪೇಟೆ | 0 | 92 | 9682 | 0 | 42 | 12 | 9828 |
| 4 | ಕೆ.ಜಿ.ಎಫ್. | 0 | 36 | 2881 | 0 | 16 | 32 | 2965 |
| 5 | ಮುಳಬಾಗಿಲು | 4 | 322 | 4850 | 0 | 0 | 15 | 5191 |
| 6 | ಶ್ರೀನಿವಾಸಪುರ | 0 | 210 | 5490 | 2 | 0 | 26 | 5728 |
| | ಒಟ್ಟು | **4.4** | **777** | **47074** | **2** | **84** | **391.2** | **48333** |